# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ಕಾರ್ಯಾಲಯ, ಗುಬ್ಬಿ

**ದಿನಾಂಕಃ16.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿದಾರರ ಹೆಸರು<br>ವರ್ಷ<br>ಕೆಲಸ<br>ವಾಸ್ತವ್ಯ | ಪ್ರಭುದೇವ.ಎಂ.ಎಸ್. ಬಿನ್ ಶ್ರೀಕಂಠಯ್ಯ<br>62 ವರ್ಷ<br>ವ್ಯವಸಾಯ<br>ಮಾರಶೆಟ್ಟಿಹಳ್ಳಿ |
| | **ಸತ್ಯ ಪ್ರತಿಜ್ಞೆಯ ಮೇರೆಗೆ** |

## ಮುಂದುವರೆದ ಪಾಟೀ ಸವಾಲುಃ- 2 ನೇ ಪ್ರತಿ ವಾದಿಗಳ ಪರ ವಕೀಲರಾದ ಶ್ರೀ. ಸಿ.ಸಿ.ಸಿ..ರವರಿಂದ

ಮೃತ ವಾದಿ ನಾಗರಾಜು ಹಾಗೂ ಸುಧಾಮಣಿ ಗಂಡ ಹೆಂಡತಿ ಎಂದು ಹೇಳಲು ಮತ್ತು ಒಟ್ಟಿಗೆ ಜೀವನ ಮಾಡುತ್ತಿದ್ದರು ಎಂದು ಹೇಳಲು ನೀವೇನಾದರು ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಮೃತ ವಾದಿ ನಾಗರಾಜು ಹಾಗೂ ಸುಧಾಮಣಿ ಇವರ ಜೊತೆ ಇನ್ಯಾರು ವಾಸ ಮಾಡುತ್ತಿದ್ದರು ಎಂದರೆ ಸಾಕ್ಷಿ ಬೇರೆ ಯಾರು ವಾಸ ಮಾಡುತ್ತಿರಲಿಲ್ಲ ಎನ್ನುತ್ತಾರೆ. ನೀವು ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಸುಧಾಮಣಿ ಹಾಗೂ ನಾಗರಾಜು ರವರು ನಮ್ಮ ಕುಟುಂಬದ ಎಲ್ಲರೊಂದಿಗೆ ಅನ್ಯೂನ್ಯವಾಗಿ ಇದ್ದರು ಎಂದು ಬರೆಸಿದ್ದಿರಿ ನಿಮ್ಮ ಕುಟುಂಬ ಅಂದರೆ ಯಾರು ಯಾರು ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ನಾನು, ನನ್ನ ಹೆಂಡತಿ ಹಾಗೂ ನನ್ನ ಮಗ ಎನ್ನುತ್ತಾರೆ. ನಾಗರಾಜು, ಸುಧಾಮಣಿ, ನೀವು ಹಾಗೂ ನಿಮ್ಮ ಕುಟುಂಬದವರು ಒಟ್ಟಿಗೆ ವಾಸ ಇದ್ರಾ ಎಂದರೆ ಸಾಕ್ಷಿಯು ಇಲ್ಲ ಅವರು ಬೇರೆ ವಾಸ ಇದ್ದೆವು ಅವರು ಬೇರೆ ವಾಸ ಇದ್ದರು ಎನ್ನುತ್ತಾರೆ. ಸುಧಾಮಣಿ ಈಗಾಲು ಸಹ ನನ್ನ ಜೊತೆ ಹಾಗೂ ನನ್ನ ಕುಟುಂಬದ ಜೊತೆ ಒಳ್ಳೆಯ ಭಾಂಧವ್ಯ ಹೊಂದಿದ್ದಾರೆ ಎಂದರೆ ಸರಿ. ಸುಧಾಮಣಿ ಮೃತವಾದಿ ನಾಗರಾಜ್ ನ

ಹೆಂಡತಿ ಅಲ್ಲ ಅಕೆ ನನ್ನ ಹಾಗೂ ನನ್ನ ಕುಟುಂಬಕ್ಕೆ ಬಹಳ ಅತ್ಮೀಯಳು ಅಂದರೆ ಸರಿ. ನನ್ನ ಹಾಗೂ ಸುಧಾಮಣಿಯವರು ನಡುವೆ ಅತ್ಮೀಯತೆ ಇರುವುದರಿಂದ ನಾನು ಸುಧಾಮಣಿ ವಾದಿ ನಾಗರಾಜ್ ನ ಹೆಂಡತಿ ಎಂದು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮಾರಶೆಟ್ಟಿಯಲ್ಲಿ ಗ್ರಾಮದ ಸ.ನಂ.184 ರಲ್ಲಿ ನನ್ನ ಹಾಗೂ ಮೃತ ವಾದಿ ನಾಗರಾಜ್ ಹೆಸರಿನಲ್ಲಿ ತಲಾ 1 ಎಕರೆ 8 ವರೆ ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನು ನನ್ನ ಮತ್ತು ಮೃತ ವಾದಿ ನಾಗರಾಜ್ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ಸರಿ. ಮಾರಶೆಟ್ಟಿಯಲ್ಲಿ ಗ್ರಾಮದ ಸ.ನಂ.128 ರಲ್ಲಿ ನನ್ನ ಹಾಗೂ ಮೃತ ವಾದಿ ನಾಗರಾಜ್ ಹೆಸರಿನಲ್ಲಿ ತಲಾ 3 ಎಕರೆ 29 ವರೆ ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ ಜಮೀನು ನನ್ನ ಮತ್ತು ಮೃತ ವಾದಿ ನಾಗರಾಜ್ ಹೆಸರಿನಲ್ಲಿ ಜಂಟಿ ಖಾತೆ ಇದೆ ಎಂದರೆ ಸರಿ. ಮೇಲೆ ಹೇಳಿದ ಎರಡು ಸರ್ವೆ ನಂಬರ್ ಜಮೀನುಗಳು ಒಂದಕ್ಕೊಂದು ಲಗತ್ತಾಗಿದೆ ಎಂದರೆ ಸರಿ. ಎರಡು ಸರ್ವೆ ನಂಬರ್ ಜಮೀನುಗಳು ತೋಟ ಎಂದರೆ ಸಾಕ್ಷಿಯು ಸ.ನಂ.128 ರಲ್ಲಿ ತೋಟ ಇದೆ. ಸ.ನಂ.184 ರ ಜಮೀನು ಬೀಳು ಎನ್ನುತ್ತಾರೆ. ಸ.ನಂ.128 ರಲ್ಲಿ ನಾನೇ ಚೇಣಿ ಮಾಡುತ್ತಿದ್ದೇನೆ. ಸ.ನಂ.184 ರಲ್ಲಿ ನಾನೇ ವ್ಯವಸಾಯ ಮಾಡುತ್ತಿದ್ದೇನೆ ಎಂದರೆ ಸರಿ. ಮೇಲೆ ಹೇಳಿದ ಎರಡೂ ಜಮೀನುಗಳಲ್ಲಿ ಮೃತ ವಾದಿ ನಾಗರಾಜುವಿಗೆ ಸೇರಿದ ಪಾಲಿನ ಜಮೀನನ್ನು ನಾನೇ ಪಡೆಯಬೇಕೆಂಬ ಅಸೆ ಹೊಂದಿದ್ದೇನೆ ಎಂದರೆ ಸಾಕ್ಷಿಯು ನನ್ನ ಪಾಲಿಗೆ ಬರಬೇಕಾದ್ದನ್ನು ನಾನು ಕೇಳುತ್ತೇನೆ ಎನ್ನುತ್ತಾರೆ. ಮೇಲೆ ಹೇಳಿದಂತೆ ಮೃತ ವಾದಿ ನಾಗರಾಜು ವಿಗೆ ಸೇರಿದ ಜಮೀನುಗಳನ್ನು ನಾನು ಖರೀದಿಸಬೇಕು ಅಥವಾ ಪಡೆದುಕೊಳ್ಳಬೇಕು ಎಂಬ ಇಚ್ಚೆ ಇರುವುದರಿಂದ, ಸುಧಾಮಣಿ, ಮೃತ ವಾದಿ ನಾಗರಾಜು ರವರ ಹೆಂಡತಿ ಎಂದು ಸೃಷಿಸಿ ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ಹಾಗೂ 3 ನೇ ಪ್ರತಿವಾದಿ ಮೃತ ವಾದಿ ನಾಗರಾಜು ರವರ ಸಹೋದರಿಯರು ಎಂದರೆ ಸರಿ. 1 ನೇ ಪ್ರತಿವಾದಿ ಮೃತ ವಾದಿಯ ತಂದೆ ಎಂದರೆ ಸರಿ. ವಾದಿ ಮೃತಪಟ್ಟ ಮೇಲೆ ಅತನ ಅಸ್ತಿಗಳು ಪ್ರತಿವಾದಿಗಳಿಗೆ ಸೇರತಕ್ಕದು ಎಂದರೆ ಸರಿಯಲ್ಲ. ಪ್ರತಿವಾದಿಗಳು ಮೃತ ವಾದಿಯ ವಾರಸುದಾರರು ಹಾಗೂ ವಾದಿಯ ಅಸ್ತಿ ಪ್ರತಿವಾದಿಗಳಿಗೆ ಸೇರಿತಕ್ಕದು ಎಂದರೆ ಸರಿಯಲ್ಲ. ಪ್ರತಿವಾದಿಗಳು ನನಗೆ ವಾದಿಯ ಅಸ್ತಿಯನ್ನು ಕೊಡದೇ

ಇದ್ದ ಕಾರಣ ನಾನು ಸುಧಾಮಣಿ ಮೃತ ವಾದಿಯ ಹೆಂಡತಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ವಾದಿ ನಾಗರಾಜು ಹಾಗೂ ಸುಧಾಮಣಿ ಗಂಡ ಹೆಂಡತಿ ಎಂದು ಹೇಳಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ಮೃತ ವಾದಿ ಕ್ಯಾನ್ಸರ್ ಖಾಯಿಲಿಯಿಂದ ಬಳಲುತ್ತಿದ್ದರು. ಅ ರೀತಿ ಮೃತ ವಾದಿಗೆ ಕ್ಯಾನ್ಸರ್ ಖಾಯಿಲೆ ಇತ್ತು ಎಂದು ಹೇಳಲು ನಾನು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ. ಸುಧಾಮಣಿ ವಾದಿ ನಾಗರಾಜು ರವರಿಗೆ ಎಲ್ಲಿ ಚಿಕಿತ್ಸೆ ಕೊಡಿಸುತ್ತದ್ದರು ಎಂದು ನನಗೆ ಗೊತ್ತಿಲ್ಲ. ಸುಧಾಮಣಿ ವಾದಿ ನಾಗರಾಜು ರವರ ಚಿಕಿತ್ಸೆ ಯಾರ ಬಳಿ ಸಾಲ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ ಹಾಗೂ ನನ್ನ ಬಳಿ ಯಾವುದೇ ದಾಖಲೆ ಇಲ್ಲ. ಮೃತ ವಾದಿ ನಾಗರಾಜು ಮೃತಪಟ್ಟ ಅತನ ಅಂತ್ಯಕ್ರಿಯೆನೆಲ್ಲ ಹಾಗೂ ಅಪರ ಕಾರ್ಯಗಳನ್ನು ಸುಧಾಮಣಿ ಮಾಡಿದರು ಎಂದು ಹೇಳಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ವಾದಿ ನಾಗರಾಜು ರವರ ಅಂತ್ಯ ಸಂಸ್ಕಾರವನ್ನು 1 ನೇ ಪ್ರತಿವಾದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ಸುಧಾಮಣಿ ಮಾಡಿದರು ಎನ್ನುತ್ತಾರೆ. ನಮ್ಮ ಸಮುದಾಯದಲ್ಲಿ ಪುರುಷರು ಅಂತ್ಯ ಸಂಸ್ಕಾರ ಮಾಡಬೇಕು ಎಂಬ ಸಂಪ್ರದಾಯ ಇದೆ ಎಂದರೆ ಸರಿ. ವಾದಿ ಮೃತ ಪಟ್ಟ ಕಾಲಕ್ಕೆ 1 ನೇ ಪ್ರತಿವಾದಿ ಜೀವಂತ ಇದ್ದರು ಎಂದರೆ ಸರಿ. ನಮ್ಮ ಗ್ರಾಮದಲ್ಲಿ ಸುಮಾರು 250 ಮನೆಗಳು ಇವೆ. ನನ್ನ ಗ್ರಾಮದ ಜನಸಂಖ್ಯೆ ಎಷ್ಟು ಎಂದು ನನಗೆ ಗೊತ್ತಿಲ್ಲ. ವಾದಿ ನಾಗರಾಜು ಮೃತಪಟ್ಟಿದ್ದು ಮತ್ತು ಅತನ ಅಂತ್ಯ ಸಂಸ್ಕಾರ ಅಗಿದ್ದನ್ನು ಅನೇಕ ನಮ್ಮ ಗ್ರಾಮಸ್ಥರು ನೋಡಿದ್ದಾರೆ ಎಂದರೆ ಸರಿ. ನಾಗರಾಜುವಿನ ಅಂತ್ಯ ಸಂಸ್ಕಾರದಲ್ಲಿ ನಮ್ಮ ಗ್ರಾಮದ ಬಹಳಷ್ಟು ಜನ ಸೇರಿದ್ದರು ಎಂದರೆ ಸರಿ. ವಾದಿಯ 11 ದಿನದ ಅಪರ ಕಾರ್ಯವನ್ನು 1 ನೇ ಪ್ರತಿವಾದಿಯ ಮನೆಯಲ್ಲಿ ಮಾಡಿದರು ಎಂದರೆ ಸರಿಯಲ್ಲ ಸುಧಾಮಣಿ ಮಾಡಿದರು ಎನ್ನುತ್ತಾರೆ. ಪ್ರತಿವಾದಿಗಳೆಲ್ಲ ಸೇರಿ ನಾಗರಾಜ ನ ಅಂತ್ಯ ಕ್ರಿಯೆ ಹಾಗೂ 11 ದಿನದ ಅಪರ ಕಾರ್ಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾಗರಾಜು ಮರಣ ಹೊಂದಿದ ಮೇಲೆ ಸುಧಾಮಣಿ ಗಂಡನ ಮನೆಯಲ್ಲಿ ವಾಸವಾಗಿದ್ದಾಳೆ ಎಂದು ಹೇಳಿದ್ದಿರಿ ಈ ಬಾಬ್ತು ನೀವೇನಾದರು ದಾಖಲೆ ಹಾಜರುಪಡಿಸಿದ್ದಿರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಯಾವುದೇ ಗ್ರಾಮದಲ್ಲಿ ವ್ಯಕ್ತಿ ವಾಸವಾಗಿದ್ದರೆ ತಹಸೀಲ್ದಾರ್ ರವರು

ವಾಸದ ಪ್ರಮಾಣ ಪತ್ರವನ್ನು ನೀಡುತ್ತಾರೆ ಎಂದರೆ ಸರಿ. ನಾನು ಮತ್ತು ಸುಧಾಮಣಿ ಈ ಪ್ರಕರಣದಲ್ಲಿ ನ್ಯಾಯಾಲಯಕ್ಕೆ ಒಟ್ಟಿಗೆ ಬರುತ್ತೇವೆ ಎಂದರೆ ಸರಿ. ಸುಧಾಮಣಿಗೆ ಅನುಕೂಲವಾಗಲೀ ಎಂದು ಹಾಗೂ ಮೃತ ವಾದಿಯ ಅಸ್ತಿಯನ್ನು ಕಬಳಿಸುವ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಪ್ರಮಾಣ ಪತ್ರ ಹಾಕಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿ ನಾಗರಾಜು ಮೃತ ಪಟ್ಟ ಮೇಲೆ ಅವರ ಅಂತ್ಯ ಸಂಸ್ಕಾರಕ್ಕೆ ಬಂದಿರಲಿಲ್ಲ ಎಂದು ಸುಳ್ಳು ಬರೆಸಿದ್ದೇನೆ ಎಂದರೆ ಸರಿಯಲ್ಲ. ಮೊದಲಿನಿಂದಲೂ ನನಗೂ ಹಾಗೂ ಪ್ರತಿವಾದಿಗಳಿಗೆ ಅಸ್ತಿ ವಿಚಾರದಲ್ಲಿ ನನಗೆ ಅವರ ಮೇಲೆ ದ್ವೇಷ, ಅಸೂಹೆ, ಮನಸ್ತಾಪ ಇದೆ ಎಂದರೆ ಸರಿಯಲ್ಲ. ಅಸ್ತಿ ವಿಚಾರವಾಗಿ ನನ್ನ ಹಾಗೂ ಪ್ರತಿವಾದಿಗಳ ನಡುವೆ ದಾವೆಗಳು ಇವೆ ಎಂದರೆ ಸರಿ.

**ಮರುವಿಚಾರಣೆ ಇಲ್ಲ.**

ಓ . ಹೇ. ಕೇ. ಸರಿ. ಇದೆ

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಗುಬ್ಬಿ

Pw.3 present He is further cross examined by L/c for defendant.

Plaintiff counsel submits she has no further evidence.

For defendant evidence.

Call on.04.01.25.